ದಿನಾಂಕ 26-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ವಾದಿಯರ ಪರವಾಗಿ ಮೇಡಮ್ ಎಲ್ ಎಫ್ ವಕೀಲರಿಂದಃ**

ವಾದಿಯವರು ಪ್ರತಿವಾದಿಯವರ ವಿರುದ್ಧ ವಿಭಾಗ ಕೋರಿ ದಾವೆಯನ್ನು ಸಲ್ಲಿಸಿದ್ದರು. 2, 4 ಮತ್ತು 5 ನೇ ಪ್ರತಿವಾದಿಯವರು ಪ್ರತಿವಾದ ಪತ್ರದೊಂದಿಗೆ ಕೌಂಟರ್ ಕ್ಲೈಮನ್ನು ಕೋರಿದ್ದರು. ದಿನಾಂಕ 11-06-2024 ರಂದು ವಾದಿಯವರು ತಮ್ಮ ದಾವೆಯನ್ನು ವಜಾ ಮಾಡುವಂತೆ ಮೆಮೋ ಸಲ್ಲಿಸಿದ್ದರು. ವಾದಿಯವರು ಸಲ್ಲಿಸಿದ್ದ ಮೆಮೋ ಅಧಾರದ ಮೇಲೆ ವಾದಿಯವರ ದಾವೆಯನ್ನು ವಾಜಾ ಮಾಡಲಾಯಿತು. ಆದ್ದರಿಂದ 2, 4 ಮತ್ತು 5 ನೇ ಪ್ರತಿವಾದಿಯವರು ಸಲ್ಲಿಸಿದ್ದ ಕೌಂಟರ್ ಕ್ಲೈಮನ್ನು ವಾದ ಪತ್ರವೆಂದು ಪರಿಗಣಿಸಲಾಯಿತು.

ನಾನು ಕೌಂಟರ್ ಕ್ಲೈಮಿನಲ್ಲಿ 2 ನೇ ವಾದಿ (2 ನೇ ಪ್ರತಿವಾದಿ) ಯಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ನೀಡಿರುವ ಮಾಹಿತಿ ಮೇರೆಗೆ ತಯಾರಿಸಿದ್ದು, ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ. ಆದ್ದರಿಂದ ನಾನು ಕೌಂಟರ್ ಕ್ಲೈಮಿನಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರಿಕೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ, ಉಡುಪಿ.